# LIBRARY & INFORMATION CENTRE

## GIT in NEWS

**Samyukta Karnataka 07-03-2016**

# ವಿಶಾಲ ಶೇಖರ್ ಹಾಡಿಗೆ ಮನಸೋತ ಕುಂದಾನಗರಿ ಜನತೆ

• ಮಾಲತೇಶ್ ಹೂಲಿಹಳ್ಳಿ

ಬೆಳಗಾವಿ

ನೀವು ಯಾರೇ ಆಗಿರಬಹುದು. ಆದ-'ರೆ ಅಲ್ಲಿ ಕೂತಿದ್ದೀರಿ ಅಂದ ಮೇಲೆ ಸ್ಟೆಪ್ ಹಾಕೇ ಹಾಕುತ್ತೀರಿ. ಹೌದು. ಅಷ್ಟೊಂದು ಜೋಶ್ ನಿಮ್ಮಲ್ಲಿ ಉಕ್ಕಿ ಹರಿಯುತ್ತದೆ. ಯಾಕೆ ಹೀಗೆ ಎಂದು ಯೋಚನೆ ಮಾಡುತ್ತಿದ್ದೀರಾ ? ಏನಿಲ್ಲಪ್ಪಾ ಇದಕ್ಕೆಲ್ಲ ಕಾರಣ ವೇದಿಕೆ ಮೇಲಿರುವವರು ಮಾಡುವ ಮೋಡಿ... ಹೂಂ. ನಿಮ್ಮ ಊಹೆ ಸರಿ ಇವರಲ್ಲಿ ಯಾವುದೇ ಕಣ್ಕಟ್ ಇಲ್ಲ ಸ್ವಾಮಿ... ಇದೆಲ್ಲಾ ಸಂಗೀತದ ಮಹಿಮೆ.

ಹಾಗಾಗಿಯೇ ಇಲ್ಲಿ ಬಂದವರಲ್ಲಿ ಹೆಚ್ಚಿನವರೂ ಜೋಶ್‌ನಲ್ಲಿ ಇದ್ದರು. ಮನಸ್ಸಿನಲ್ಲಿ ಗುನುಗುನು ಗಾಯನ... ಜೊತೆಯಲ್ಲಿ ನಾಲ್ಕೈದು ಸ್ಟೆಪ್ ಡ್ಯಾನ್ಸ್, ಅರೇ ಏನಪ್ಪಾ ಇವರಿಗೆ ಏನಾಗಿದೆ ಎನ್ನುವುದಕ್ಕೆ ಆ ಇಬ್ಬರು ಜೋಡಿ ಗಾಯಕರ ಮೋಡಿ ಗಾನವೇ ಕಾರಣ ನೋಡಿ.

ಹೌದು... ಬೆಳಗಾವಿಯ ಕೆಎಲ್‌ಎಸ್ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಜಿರ್ -2016 ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕರಾದ ವಿಶಾಲ ದದ್ಲಾನಿ ಹಾಗೂ ಶೇಖರ್ ರವಿಜಾನಿ ಅವರ ಸಂಗೀತ ಕಾರ್ಯಕ್ರಮದಲ್ಲಿ ಯುವಕರು ಮಹಿಳೆಯರು ಹುಚ್ಚೆದ್ದು ಕುಣಿದ ದೃಶ್ಯ ಎಲ್ಲೆಡೆ ಕಂಡು ಬಂತು.

ಇಬ್ಬರು ಗಾಯಕರು ವೇದಿಕೆಗೆ ಬರಲು ತಡವಾದರೂ ಅವರ್‍ಯಾರೂ ನಿರಾಶೆ ಪಡಲಿಲ್ಲ. ಬದಲಾಗಿ ಇನ್ನಷ್ಟು ಕಾತರದಿಂದ ಮೈಯೆಲ್ಲಾ ಕಣ್ಣಾಗಿಸಿ ಅವರ ಬರುವಿಕೆಗೆ ಕಾತುರದಿಂದ ಕಾದರು. ತಮ್ಮ ನೆಚ್ಚಿನ ಗಾಯಕರು ವೇದಿಕೆ ಏರುತ್ತಿದ್ದಂತೆಯೇ ಪ್ರೇಕ್ಷಕರ ಕೇಕೆ ಹರ್ಷೋದ್ಗಾರ ಮುಗಿಲು ಮುಟ್ಟಿತು. ವಿಶಾಲ ಶೇಖರ ಎಂದು ಹೆಸರು ಹಿಡಿದು ಆತ್ಮೀಯತೆಯಿಂದ ಕೂಗುತ್ತಿದ್ದುದು ಕಾರ್ಯಕ್ರಮದ ಪ್ರಾರಂಭದಿಂದ ಅಂತ್ಯದವರೆಗೂ ಕೇಳುತ್ತಿತ್ತು. ನೆಚ್ಚಿನ ಗಾಯಕರನ್ನು ಮೊಬೈಲ್ ಟಾರ್ಚ್ ದೀಪದ ಬೆಳಕಿನಲ್ಲಿ ಬರಮಾಡಿಕೊಂಡ ಅಭಿಮಾನಿಗಳ ಸಡಗರಕ್ಕೆ ಮಾತ್ರ ಮಿತಿಯೇ ಇರಲಿಲ್ಲ.



ಬೆಳಗಾವಿ ಕೆಎಲ್‌ಎಸ್ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಜಿರಾ -2016 ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕರಾದ ವಿಶಾಲ ದದ್ಲಾನಿ ಹಾಗೂ ಶೇಖರ್ ರವಿಜಾನಿ ಕಂಡು ಬಂದಿದ್ದು ಹೀಗೆ.

ಹೌದು .. ಇಬ್ಬರು ಯುವ ಗಾಯಕರ ಜೋಡಿಯ ಮೋಡಿಗೆ ಅಕ್ಷರಶಃ ಗೋಗಟೆ ಕಾಲೇಜು ಆವರಣದಲ್ಲಿ ಸೇರಿದ್ದ ಅಪಾರ ಅಭಿಮಾನಿಗಳು ಮಂತ್ರಮುಗ್ಧರಾಗಿದ್ದರು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೊನಲು ಬೆಳಕಿನ ಆ ಕಾರ್ಯಕ್ರಮದಲ್ಲಿ ತಮ್ಮ ಗಾಯಕರ ಹಾಡುಗಳಿಗೆ ಧ್ವನಿ ಗೂಡಿಸಿದರೆ ಕೆಲವರೂ ವೇದಿಕೆ ಕೆಳಗಡೆ ತಮ್ಮದೇ ಆದ ರೀತಿಯಲ್ಲಿ ಸ್ಟೆಪ್ ಹಾಕಿ ಕುಣಿದು ಕುಪ್ಪಳಿಸಿದರು. ಇನ್ನೂ ಕೆಲವರು ತಮ್ಮ ನೆಚ್ಚಿನ ಗಾಯಕರ ಫೋಟೋ ತೆಗೆಯಲು ಹರಸಾಹಸ ಪಡುತ್ತಾ ಕೊನೆಗೂ ಫೋಟೋ ಕ್ಲಿಕ್ಕಿಸಿ ಖುಷಿ ಪಟ್ಟರು.

ವೇದಿಕೆಗೆ ಬಂದ ವಿಶಾಲ ಶೇಖರ್ ಜೋಡಿ ತಮ್ಮದೇ ರೀತಿಯಲ್ಲಿ ಅದ್ಭುತ್ ಹಾಡು ಡ್ಯಾನ್ಸ್ ಮೂಲಕ ನೆರೆದ ಅಭಿಮಾನಿಗಳಿಗೆ ರಸದೌತಣ ನೀಡಿದರು. ಏನೇ ಹೇಳಿ ಆ ಇಬ್ಬರು ಗಾಯಕರ ಮೋಡಿಗೆ ಇಡೀ ಕಾರ್ಯಕ್ರಮದ ಒಂದು ಕ್ಷಣ ರಫ ರಫ ಮಳೆ ಬಂದಂತೆ ಕೇಕೇ ಶಿಳ್ಳೆ, ಬಂದರೆ ಇನ್ನೂ ಒಂದೊಂದು ಸಾರಿ ಬರಿ ಚಪ್ಪಾಳೆ ಶಬ್ಧ ಮುಗಿಲು ಮುಟ್ಟುವಂತೆ ಕೇಳಿಸುತ್ತಿದ್ದುದು ವಿಶೇಷವಾಗಿತ್ತು.

**ಕುಣಿದ ವಿಐಪಿಗಳು**

ಗೋಗಟೆ ತಾಂತ್ರಿಕ ಕಾಲೇಜು ಆವರಣದಲ್ಲಿ ನಡೆದ ಜಿರಾ-16 ರಸಮಂಜರಿ ಕಾರ್ಯಕ್ರಮ ಅಕ್ಷರಶಃ ಹೊಸ ಇತಿಹಾಸಕ್ಕೆ ಕಾರಣವಾಗಿತ್ತು. ಹೌದು ವೇದಿಕೆಗೆ ಆಗಮಿಸಿದ ವಿಶಾಲ ಶೇಖರ್ ಅವರು ಎರಡು ಹಾಡು ಹೇಳುವಷ್ಟರಲ್ಲಿ ಒಂದು ಕ್ಷಣ ವಿಐಪಿಗಳನ್ನು ಉದ್ದೇಶಿಸಿ ಮಾತನಾಡಲು ಶುರು ಮಾಡಿಬಿಟ್ಟರು. ಅದು ಬರೀ ಮಾತಲ್ಲ! ಆ ಮಾತುಕತೆಯಲ್ಲಿ ಅವರನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುವ ಹುನ್ನಾರವೂ ಇತ್ತು ನೋಡಿ!

ವೇದಿಕೆಯ ಮುಂಭಾಗದಲ್ಲೇ ಆಸೀನರಾಗಿದ್ದ ವಿಐಪಿಗಳು ಈ ರೀತಿ ಸುಮ್ಮನೇ ಕುಳಿತುಕೊಳ್ಳುವುದರಿಂದ ನಮಗೆ ಹಾಡು ಹೇಳಲು ಮನಸ್ಸಾಗುವುದಿಲ್ಲ. ನೀವೆಲ್ಲರೂ ನಿಮ್ಮ ಘನತೆ ಗೌರವಗಳನ್ನು ಒಂದು ಕ್ಷಣ ಬದಿಗಿಟ್ಟು ಈ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಕೈಜೋಡಿಸಿ ಎಂದರು.

ಎಲ್ಲ ವಿಐಪಿಗಳು ಎದ್ದು ನಿಂತು ಅವರ ಎರಡು ಹಾಡುಗಳಿಗೆ ಧ್ವನಿಗೂಡಿಸಿ ತಮ್ಮದೇ ಆದ ರೀತಿಯಲ್ಲಿ ಕುಣಿದು ಕುಪ್ಪಳಿಸಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು. ಹೌದು ಸಂಗೀತಕ್ಕೆ ಇರುವ ಶಕ್ತಿ ಇನ್ಯಾವುದಕ್ಕಿದೆ ಹೇಳಿ.? ಸಣ್ಣ ಮಕ್ಕಳು ಲಾಲಿ ಹಾಡಿಗೆ ಮನಸೋತು ಸುಮ್ಮನೆ ಜೋಜೋ ಲಾಲಿ ಮಾಡ್ತಾರೆ. ಆದರೆ ವಿಶಾಲ್ ಮತ್ತು ಶೇಕರ್ ಅವರ ಹಾಡು ಕೇಳಿ ನೆರೆದವರೆಲ್ಲಾ ಹುಚ್ಚೆದ್ದು ಕುಣಿಯುತ್ತೆ.

**ಝಳಝಳಿಸಿದ ಸ್ಮಾರ್ಟ್ ಫೋನ್**

ಕಾರ್ಯಕ್ರಮದಲ್ಲಿ ಹುಡುಗರು, ಹುಡುಗಿಯರು, ಮಕ್ಕಳು, ವೃದ್ಧರು ಯಾರ ಕೈಯಲ್ಲಿ ನೋಡಿದರೂ ಸ್ಮಾರ್ಟ್ ಫೋನ್. ಕೆಲವರು ನೆಚ್ಚಿನ ಗಾಯಕರ ಹಾಡು ವಿಡಿಯೋ ಮಾಡಿಕೊಂಡರೆ, ಇನ್ನೂ ಕೆಲವರೂ ಸೆಲ್ಫಿ, ರೆಕಾರ್ಡ್ ತೆಗೆದುಕೊಳ್ಳಲು ಮುಂದಾಗಿದ್ದು ವಿಶೇಷವಾಗಿತ್ತು. ಇನ್ನೂ ಕೆಲವರು ಗಾಯಕರ ಫೋಟೋವನ್ನು ಹತ್ತಿರದಿಂದ ತೆಗೆಯಲು ಪರದಾಡುತ್ತಿದ್ದ ದೃಶ್ಯ ಕಂಡು ಬಂತು. ಆದರೆ ಅಭಿಮಾನಿಗಳ ಮನಸು ಅರ್ಥ ಮಾಡಿಕೊಂಡಂತೆ ಅವರಿಗೆ ಸಹಕಾರ ನೀಡಿ ನಿಮ್ಮ ಪ್ರೀತಿ ಹೀಗೆ ಸದಾ ಇರಲಿ ಎಂದು ಬಯಸಿದ್ದೂ ನಿಜ.